852(912) ಶ್ರೀ ಹೆಚ್ ಡಿ ಬನವರಾಜು (ವಿರಾಜಪೇಟೆ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕೋಪಯೋಗಿ ಇಲಾಖೆಯಲ್ಲಿ ಮುಖ್ಯ ಇಂಜಿನಿಯರ್ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಖಾಲಿ ಇರುವ ಹುದ್ದೆಗಳು ಎಷ್ಟು ಹಾಗೂ ಈ ಹುದ್ದೆಗಳ ಭರ್ತಿಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ,

ಇ) ಲೋಕೋಪಯೋಗಿ ಇಲಾಖೆಯಲ್ಲಿರುವ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಿಂದ ಅಧೀಕ್ಷಕ ಅಭಿಯಂತರರವರೆಗೆ ಕೆಲಸ ನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಜೇಷ್ಟತಾ ಪಟ್ಟಿಯನ್ನು 85ನೇ ಸಂವಿಧಾನ ವಿಧಿಯ ಅನ್ವಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಅನುಗುಣದ ದಿನಾಂಕ 19–10–2006ರಂದು ನೀಡಿರುವ ಅಂತಿಮ ತೀರ್ಮ ಪ್ರಕಾರ ತಯಾರು ಮಾಡಲಾಗಿದೆಯೇ,

ಈ) ಹಾಗಿಲ್ಲದಿದ್ದಲ್ಲಿ ಇದರಿಂದಾಗಿ ಪದೋನ್ನತಿ ಪಡೆಯಬೇಕಾಗಿದ್ದ ಈ ವರ್ಗದವರಿಗೆ ಅನ್ಯಾಯವಾಗುತ್ತಿರುವುದನ್ನು ನರಿವಡಿಸಲು ಸರ್ಕಾರ ಕೈಗೊಂಡಿರುವ ಕ್ರಮ ಏನು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು)

ಅ) ಹೌದು

ಆ) ಲೋಕೋಪಯೋಗಿ ಹಾಗೂ ಜಲಸಂಪನ್ಮೂಲ ಇಲಾಖೆಗಳಲ್ಲಿ ಒಟ್ಟಾರೆ 27 ಮುಖ್ಯ ಇಂಜಿನಿಯರ್ ಹುದ್ದೆಗಳು ಖಾಲಿ ಇರುತ್ತವೆ

ಈ ಹುದ್ದೆಗಳನ್ನು ಭರ್ತಿ ಮಾಡಲು ಅಧೀಕ್ಷಕ ಇಂಜಿನಿಯರ್‌ರ ಜೇಷ್ಟತಾ ಪಟ್ಟಿಯನ್ನು ತಯಾರಿಸುವ ಸಂಬಂಧ ಭಾರತ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ಅರ್ಜಿ ಸಂ 61 2002 ಸಂಪೂರ್ಣವಾಗಿ ಇತ್ಯರ್ಥವಾಗುವುದನ್ನು ಕಾಯಲಾಗುತ್ತಿದೆ

ಇ) ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಕಾರ್ಯವಾಲಕ ಇಂಜಿನಿಯರ್ ವೃಂದದಿಂದ ಅಧೀಕ್ಷಕ ಇಂಜಿನಿಯರ್ ವೃಂದದವರೆಗೆ ಪರಿಶಿಷ್ಟ

ಜಾತಿ ಮತ್ತು ಪರಿಶಿಷ್ಟ ಪಂಗಡದವರ ಪ್ರತ್ಯೇಕ ಜೇಷ್ಟತಾ ಪಟ್ಟಿಯನ್ನು ತಯಾರು ಮಾಡಿರುವುದಿಲ್ಲ

ಈ) ಈ ಭಾರತ ಸರ್ವೋನ್ನತ ನ್ಯಾಯಾಲಯವು ಅರ್ಜಿ ಸಂ 61/2002ರಲ್ಲಿ ಅಂತಿಮ ತೀರ್ಪು ನೀಡಿದ ನಂತರ ಇಂಜಿನಿಯರ್ ವೃಂದಗಳ ಅಂತಿಮ ಜೇಷ್ಟತಾ ಪಟ್ಟಿಯನ್ನು ಪ್ರಕಟಿಸಿ ಅರ್ಹರಾದ ಪರಿಶಿಷ್ಟ ಜಾತಿ ಪರಿಶಿಷ್ಟ ವಂಗಡದವರಿಗೆ ಬಡ್ತಿ ನೀಡಲಾಗುವುದು

853(406) ಶ್ರೀಮತಿ ಭಾಗೀರಥಿ ಟಿ (ಕೊಟ್ಟೂರು) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೂಡ್ಲಗಿ ತಾಲ್ಲೂಕಿನಲ್ಲಿರುವ ಲೋಕೋಪಯೋಗಿ ರಸ್ತೆಗಳು ಎಷ್ಟು, ಹಾಗೂ ಆ ರಸ್ತೆಗಳ ಪೈಕಿ ಎಷ್ಟು ರಸ್ತೆಗಳನ್ನು ಮೇಲ್ದರ್ಜೆಗೇರಿಸಲಾಗಿದೆ,

ಆ) ಈ ರಸ್ತೆಗಳ ಸುಧಾರಣೆಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು,

ಇ) 2006–07ನೇ ಸಾಲಿನಲ್ಲಿ ಈ ರಸ್ತೆಗಳಿಗಾಗಿ ಬಿಡುಗಡೆ ಮಾಡಿದ ಅನುದಾನವೆಷ್ಟು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಕೂಡ್ಲಗಿ ತಾಲ್ಲೂಕಿನ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ 3 ರಾಜ್ಯ ಹೆದ್ದಾರಿಗಳು ಹಾಗೂ 15 ಜಿಲ್ಲಾ ಮುಖ್ಯ ರಸ್ತೆಗಳಿರುತ್ತವೆ ಇವುಗಳ ಪೈಕಿ ಯಾವುದೇ ರಸ್ತೆಗಳನ್ನು ಮೇಲ್ದರ್ಜೆಗೇರಿಸಿರುವುದಿಲ್ಲ

ಆ) ಜಿಲ್ಲಾ ಮುಖ್ಯ ರಸ್ತೆಗಳ ಸುಧಾರಣೆಯನ್ನು ಮತ್ತು ರಾಜ್ಯ ಹೆದ್ದಾರಿಗಳ ನಿರ್ವಹಣೆ ಅಭಿವೃದ್ಧಿಯನ್ನು ಕೆ ಆರ್ ಡಿ ಸಿ ಎಲ್ ವತಿಯಿಂದ ಕೈಗೆತ್ತಿ ಕೊಳ್ಳಲಾಗಿದೆ

ಇ) ಜಿಲ್ಲಾ ಮುಖ್ಯ ರಸ್ತೆಗಳ ಸುಧಾರಣೆಗಾಗಿ ಲೆಕ್ಕ ಶೀರ್ಷಿಕೆ 5054ರ ಅಡಿಯಲ್ಲಿ ರೂ 16 19 ಲಕ್ಷಗಳು ಹಾಗೂ 3054 ಅಡಿಯಲ್ಲಿ ರೂ 123 69 ಲಕ್ಷಗಳ ಅನುದಾನ ನಿಗದಿಪಡಿಸಲಾಗಿದೆ

854(1087) ಶ್ರೀಮತಿ ಭಾಗೀರಥಿ ಟಿ (ಕೊಟ್ಟೂರು) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?